ನಾನುಂ ತಾನುಂ

ನಾನೇ ನಾನಾಗಿ ಇರದಂತೆ |

ತಾನೇ ತಾನಾಗಿ ಬೆಳಗುವುದು ||

ತನ್ನನು ಅರಸಿ ತನ್ನೊಳು ಬೆರೆಯಲು |

ನಾನು ತನ್ನೊಳು ಬೆರೆತಿಹುದು ||1||

ನಾನು ತನ್ನೊಳು ಬೆರೆತೊಡನೆ |

ನನ್ನ ತನ್ನ ಭೇದವು ಅಳುಹಿ ||

ತಾನೇ ತಾನಾದ ತತ್ತ್ವವು ಆಗಿ |

ತಾನೇ ತಾನಾಗಿ ಬೆಳಗಿಹುದು ||2||

ಬೆಳಗಿಹ ತಾನು ಬೆರೆತಿಹ ನಾನು |

ವಿವರಿಸಲಿನ್ನು ಉಳಿದಿಲ್ಲಾ ||

ಸುಮ್ಮನೆ ಇರಲು ಕಾರಣವಿಲ್ಲ |

ಆಡಲು ಎಂದೇ ಮೂಡಿದೆ ನಾನು ||3||

ತನ್ನನು ಬಿಟ್ಟು ಅಗಲಿದ ನಾನು |

ಆಡಲು ಎಂದು ಮೂಡಿದ ಕ್ಷಣವೇ ||

ಸುಮ್ಮನೆ ತನುವಿದು ಮೈದೋರಿ |

ಸುಮ್ಮನೆ ಜಗವು ಗೋಚರಿಸಿ ||4||

ತನುವೂ ಜಗವೂ ತೋರಿದ ಕ್ಷಣವೇ |

ತನುವೂ ಜಗವೂ ಸತ್ಯವು ಎಂದು ||

ತಾನೇ ತನುವಾಗಿ ಜಗವನು ಕಾಣಲು |

ಮನವೊಂದು ಮೂಡಿತು ಭೋಗಿಸಲೆಂದು ||5||

ಮನವೊಂದು ಹುಟ್ಟಿ ಭೋಗಿಸುತಿರಲು |
ತನುವೂ ಜಗದಲಿ ನಲಿಯುತಲಿಹುದು ||
ಮನವೂ ತನುವೂ ಜಗವನು ಭೋಗಿಸಿ |
ಇರುವ ಸತ್ಯವ ಮರೆತಿಹುದು ||6||

ಇರುವ ಸತ್ಯವ ಮರೆತಾ ಕ್ಷಣವೇ |
ಭೋಗದಿ ಮನವು ಬೆಂದಿಹುದು ||
ನಲಿದಿದ್ದ ತನುವಿದು ಬಾಡಿಹುದು |
ಕಹಿ ಕಹಿಯಾಯಿತು ಈ ಜಗವು ||7||

ಬಾಡಿದ ತನುವೂ ಬೆಂದಿಹ ಮನವೂ |
ಜಗವಿದು ಕಹಿ ಎಂದು ಅರಿತೊಡನೆ ||
ಕಾರಣವೇನೆಂದು ದಿಕ್ಕೆಟ್ಟಾಗ |
ಗುರುವಿನ ಚರಣವ ಅರಸಿಹುದು ||8||

ಗುರುವಿನ ಚರಣವು ದೊರೆತಾ ಕ್ಷಣವೇ |
ಅರಳಲು ದೊರೆಯಿತು ಪಾವನ ನಾಮವು ||
ನಾಮವೂ ಗುರುವಿನ ಸೇವೆಯೂ ಸೇರಲು |
ನಿರ್ಮಲವಾಯಿತು ನಮ್ಮನವು ||9||

ಮನವು ನಿರ್ಮಲವಾದಾ ಕ್ಷಣವೇ |
ನಮ್ಮ ಗುರುಗಳ ಕೃಪೆಯು ದೊರೆಯಿತು ||
ನಾನು ತಾನು ಒಂದಾಗಿ |
ತಾನೇ ತಾನೆಂದು ಅರಿವಾಯ್ತು ||10||